ಶ್ರೀ ಎಸ್.ಎ. ರವೀಂದ್ರನಾಥ್: ಸ್ತ್ರೀ ಸಂಘದ ಬಗ್ಗೆ ನನಗೆ ಗೊತ್ತಿಲ್ಲ. ಕೇಂದ್ರ ಮತ್ತು ರಾಜ್ಯ ಸರ್ಕಾರ ಹಿಂದಿನ ವರ್ಷ ಕೊಟ್ಟಂಥ ಹಣದಲ್ಲಿ ನಮ್ಮ ಕೇಂದ್ರ ಸರ್ಕಾರದಿಂದ 121 ಪಂಚಾಯಿತಿಗಳು ಪುರಸ್ಕಾರ, ನೂರಕ್ಕೆ ನೂರು ಪರ್ಸೆಂಟ್ ಸ್ವಚ್ಛತೆ ಕಾಪಾಡುವುದನ್ನು ಮಾಡಿದ್ದಾರೆ. ಈ ವರ್ಷ ಅದಕ್ಕಿಂತ ಹೆಚ್ಚು ಶೌಚಾಲಯಗಳನ್ನು ಕಟ್ಟುವುದನ್ನು ಮಾಡುತ್ತಿದ್ದಾರೆ. ಆ ಹಣ ದುರ್ಬಳಕೆಯಾಗಿದೆಯೇ ಎಂಬ ಬಗ್ಗೆ ವಿಚಾರ ಮಾಡಿ ತಿಳಿಸುತ್ತೇನೆ.

ಒಬ್ಬ ಮಾನ್ಯ ಸದಸ್ಯರು: 1200 ರೂಪಾಯಿ ಏನು ಶೌಚಾಲಯಕ್ಕೆ ಇವರು ಇಟ್ಟಿದ್ದಾರೆ, ಆದರೆ ಸರ್ಕಾರ ಮಾಡಿರುವ ಈ ಹಣ ಗ್ರಾಮೀಣ ಪ್ರದೇಶದಲ್ಲಿ ಯಾವುದಕ್ಕೂ ಸಾಕಾಗುವುದಿಲ್ಲ. ಬಹಳ ಕಡುಬಡವರಂತೂ ಏನು ಮಾಡಲು ಆಗುವುದಿಲ್ಲ. ಒಂದು ಶೌಚಾಲಯ ಕಟ್ಟಬೇಕೆಂದರೆ ಕನಿಷ್ಠ 3500–4000 ರೂಪಾಯಿ ಬೇಕಾಗುತ್ತದೆ. ಆದರೆ, 1200 ರೂಪಾಯಿ ಹಣವನ್ನೂ ಇವರು ಬಿಡುಗಡೆ ಮಾಡಿಲ್ಲ. ಕೂಲಿ ನಾಲಿ ಮಾಡಿ ಅವರು ಕೆಲಸ ಮಾಡಿದ್ದಾರೆ, ಆದರೆ ಇದುವರೆಗೂ ಹಣ ಬಿಡುಗಡೆ ಮಾಡಿಲ್ಲ. ಈಗಾಗಲೇ 200–300 ರೂಪಾಯಿ ಮಾತ್ರ ಬಿಡುಗಡೆಯಾಗಿದೆ. ಅದಕ್ಕೆ ಹಣವೂ ಸಾಕಾಗುವುದಿಲ್ಲ. ಒಂದು ಶೌಚಾಲಯ ಮಾಡಬೇಕಾದರೆ 3500 ರೂಪಾಯಿ ಬೇಕಾಗುತ್ತದೆ. ಅಧಿಕಾರಿಗಳು ಲೆಕ್ಕ ಮಾಡಿದ್ದಾರೆ. ದಯವಿಟ್ಟು ಅದಕ್ಕೆ ಉತ್ತರ ಕೊಡಬೇಕು.

ಶ್ರೀ ಎಸ್.ಎ. ರವೀಂದ್ರನಾಥ್: ಸರ್ಕಾರ ಇಲ್ಲಿ ಸಬ್ಸಿಡಿ ಹಣವನ್ನು ಮಾತ್ರ ಕೊಡುತ್ತದೆ. ಅದನ್ನು ಮಾಡತಕ್ಕವರಿಗೆ ಸ್ವಲ್ಪ ಸಹಾಯಧನವೆಂದು ಮಾತ್ರ ಇದನ್ನು ಕೊಡುವುದು. ಪೂರ್ತಿ ಕೊಡುವಂಥದ್ದಲ್ಲ. ಉಳಿದ ಹಣವನ್ನು ಅವರು ಹಾಕಿಕೊಂಡು ಮಾಡಿಕೊಳ್ಳಬೇಕು. ಅದು ಆ ಫಲಾನುಭವಿಗಳ ಕರ್ತವ್ಯ.

ವೈದ್ಯಕೀಯ ಮತ್ತು ಇಂಜನಿಯರಿಂಗ್ ಸೀಟುಗಳು

185 (745) ಡಾ॥ ಮಹಾದೇವಪ್ಪ ಹೆಚ್.ಸಿ. (ಟಿ. ನರಸೀಪುರ) ಮಾನ್ಯ ಉನ್ನತ ಶಿಕ್ಷಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ರಾಜ್ಯದಲ್ಲಿ ಒಟ್ಟು ಎಷ್ಟು ವೈದ್ಯಕೀಯ ಮತ್ತು ಇಂಜಿನಿಯರಿಂಗ್ ಸೀಟುಗಳಿವೆ; ಅವುಗಳಲ್ಲಿ ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ವೈದ್ಯಕೀಯ ಮತ್ತು ಇಂಜಿನಿಯರಿಂಗ್ ವಿಭಾಗದಲ್ಲಿ ಎಷ್ಟು ಸೀಟುಗಳಿವೆ;

(ಆ) ನ್ಯಾಯಾಲಯದ ತೀರ್ಪಿನ ನಂತರ ಎಷ್ಟು ಸೀಟುಗಳು ಈ ಜನಾಂಗದ ವಿದ್ಯಾರ್ಥಿಗಳಿಗೆ ಹೆಚ್ಚಾದವು ಎಂಬುದರ ಸಮಗ್ರ ಮಾಹಿತಿ ಒದಗಿಸುವುದು?

ಶ್ರೀ ಡಿ.ಹೆಚ್. ಶಂಕರಮೂರ್ತಿ (ಮಾನ್ಯ ಉನ್ನತ ಶಿಕ್ಷಣ ಸಚಿವರು)

(ಅ) ರಾಜ್ಯದಲ್ಲಿನ ವೈದ್ಯಕೀಯ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಇರುವ ಒಟ್ಟು ಸೀಟುಗಳ ವಿವರಗಳು ಈ ಕೆಳಕಂಡಂತಿವೆ.

	ಒಟ್ಟು ಸೀಟುಗಳ ಸಂಖ್ಯೆ	ಸರ್ಕಾರದ ಪಾಲಿನ ಮೀಸಲು ಸೀಟುಗಳು	
		ಎಸ್ ಸಿ	ಎಸ್.ಟಿ
ವೈದ್ಯಕೀಯ	4655	280	55
ಇಂಜಿನಿಯರಿಂಗ್	50959	3950	789

(ಆ) ದಿನಾಂಕ: 31–10–2002 ರಲ್ಲಿ ಸರ್ವೋಚ್ಚ ನ್ಯಾಯಾಲಯವು ಟಿ.ಎಂ.ಎ. ಪೈ ಪ್ರಕರಣದಲ್ಲಿ ಹಾಗೂ ತದನಂತರ ಇಸ್ಲಾಮಿಕ್ ಅಕಾಡೆಮಿ ಹಾಗೂ ಪಿ.ಎ. ಇನಾಂದಾರ್ ಪ್ರಕರಣಗಳಲ್ಲಿ ನೀಡಿದ ತೀರ್ಪಿನ ನಂತರ ಸರ್ಕಾರವು ಪ್ರತಿ ಸಾಲಿನಲ್ಲಿ ಕಾಲೇಜುಗಳ ಆಡಳಿತ ಮಂಡಳಿಗಳ ಜೊತೆ ಸೀಟು ಹಂಚಿಕೆ ಹಾಗೂ ಶುಲ್ಕ ನಿಗದಿ ಬಗ್ಗೆ ಮಾತುಕತೆ ನಡೆಸಿದ್ದು ಅದರಂತೆ 2003–04ನೇ ಸಾಲಿನಿಂದ ಈವರೆಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಮೀಸಲಿಟ್ಟ ಸೀಟುಗಳ ಸಂಖ್ಯೆ ಈ ಕೆಳಕಂಡಂತಿದೆ.

ವರ್ಷ	ಮೆಡಿಕಲ್		ಇಂಜಿನಿಯರಿಂಗ್	
	ಎಸ್‌ಸಿ	ಎಸ್‌ಟಿ	ಎಸ್‌ಸಿ	ಎಸ್.ಟಿ
2003–04	**151**	**81**	**1398**	**378**
2004–05	**275**	**54**	**4360**	**868**
2005–06	**275**	**55**	**4330**	**864**
2006–07	**280**	**57**	**4451**	**887**
2007–08	**280**	**55**	**3950**	**789**

2007–08 ನೇ ಸಾಲಿನ ಪ್ರವೇಶಾತಿ ಪ್ರಕ್ರಿಯೆಯು ಇನ್ನೂ ಪೂರ್ಣಗೊಂಡಿರುವುದಿಲ್ಲವಾದ್ದರಿಂದ ಈವರೆಗೆ ಪ್ರವೇಶಾತಿ ನೀಡಿರುವ ಮಾಹಿತಿಯನ್ನು ನೀಡಲಾಗಿದೆ.

ಡಾ॥ ಹೆಚ್.ಸಿ. ಮಹದೇವಪ್ಪ:– ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿಕೊಟ್ಟಿದ್ದಾರೆ. ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಸರ್ಕಾರದ ವಶಕ್ಕೆ 40% ಮತ್ತು COMED-Kಗೆ 40% ಮತ್ತು NRI ಗೆ 15% preferential seats filled by the institutions 5% ಎಂದು ಹೇಳಿದ್ದೀರಿ. ಸರ್ಕಾರದ ಉತ್ತರದ ಪ್ರಕಾರವೇ ಕರ್ನಾಟಕದಲ್ಲಿ 50959 ಇಂಜಿನಿಯರಿಂಗ್ ಸೀಟುಗಳಿವೆ, 4655 ಮೆಡಿಕಲ್ ಸೀಟುಗಳಿವೆ. COMED-K CET 25ರಿಂದ ಶುರುವಾಗುತ್ತಿದೆ. COMED-K admissionಗೆ 30ನೇ ತಾರೀಖು last date ಆಗಿದೆ. COMED-K ಮತ್ತು CETಎರಡಕ್ಕೂ Co-ordination ಮಾಡಲಿಕ್ಕಾಗುವುದಿಲ್ಲವೇ? ಅವರು last date ಆದಮೇಲೆ ಯಾರಿಗೂ ಕೊಡುವುದಿಲ್ಲ. ಅವರು ಯಾರಿಗೆ ಬೇಕೋ ಅವರಿಗೆ ಮಾರಾಟ ಮಾಡುತ್ತಾರೆ. ಅಲ್ಲಿಗೆ ಸರ್ಕಾರದ ವತಿಯಿಂದ ಸೀಟ್ ಪಡೆಯತಕ್ಕಂಥ ಮಕ್ಕಳಿಗೆ ಅಲ್ಲಿ ಪ್ರವೇಶ ಮಾಡುವುದಕ್ಕೆ compete ಮಾಡುವುದಕ್ಕೆ ಅವಕಾಶವನ್ನು ಸರ್ಕಾರ ತಪ್ಪಿಸಿದಂತಾಯಿತು. ಅದರ ಜೊತೆಗೆ ಈ 60% SC/ST ನಲ್ಲಿ ಜನರಿಗೆ ಮೀಸಲಾತಿಯೇ ಇಲ್ಲ. ಈ ಸರ್ಕಾರ ಮೀಸಲಾತಿ, ಒಳಮೀಸಲಾತಿ, ಸಾಮಾಜಿಕ ಕ್ರಾಂತಿ ಬಗ್ಗೆ ಮಾತನಾಡುತ್ತಿದೆ. 60% SC/ST ಜನರಿಗೆ ಮೀಸಲಾತಿಯನ್ನು ಕೊಡದಿದ್ದರೆ, ಅವರಿಗೆ technical education ಬಹಳಷ್ಟು ಪ್ರಮಾಣದ ಲಾಸ್ ಆಗುತ್ತದೆ. ನಾವು COMED -K ನಲ್ಲಿ ಸರ್ಕಾರವೇ ಈ ಮಕ್ಕಳಿಗೆ ಫೀಸನ್ನು ತುಂಬಿಸಿ, ಅವರಿಗೆ COMED -K ಪ್ರವೇಶವನ್ನು ಒದಗಿಸುತ್ತೇವೆಂದು ಸರ್ಕಾರ ಹೋದ ಸಾರಿ ಹೇಳಿತ್ತು. 1991ರಲ್ಲಿ ಮೊದಲನೇ ಬಾರಿಗೆ ಮಾನ್ಯ ವೀರಪ್ಪ ಮೊಯ್ಲಿಯವರು ಶಿಕ್ಷಣ ಮಂತ್ರಿಗಳಾಗಿದ್ದಾಗ ಜಾರಿಗೆ ಬಂದ CET ಯಿಂದಾಗಿ ಅತ್ಯಂತ ಕಡು ಬಡವರು ಇಂಜಿನಿಯರಿಂಗ್ ಮತ್ತು ಮೆಡಿಕಲ್‌ನಲ್ಲಿ ಸಂತೋಷವಾಗಿ ವಿದ್ಯಾಭ್ಯಾಸ ಮಾಡತಕ್ಕಂಥ ಅವಕಾಶವಿತ್ತು. ಈಗ ಈ ಒಂದು ನೀತಿಯಿಂದಾಗಿ ಅದನ್ನು ಸಂಪೂರ್ಣವಾಗಿ ಹೊಸಕಿ ಹಾಕಲಾಗಿದೆ. ಸರ್ಕಾರ ಈ ಮಕ್ಕಳಿಗೆ ರಕ್ಷಣೆ ಕೊಡಬೇಕಾದರೆ, ಸರ್ಕಾರವೇ ಫೀಸನ್ನು ತುಂಬತಕ್ಕಂಥ ಕೆಲಸವನ್ನು ಮಾಡಬೇಕು. ಇದರಲ್ಲಿ ನೀವು ಸುಮಾರು 60% ವೈದ್ಯಕೀಯ ಮತ್ತು ಇಂಜಿನಿಯರ್ ಕಾಲೇಜಿನಲ್ಲಿ ನೀವು ಪ್ರವೇಶವನ್ನೇ ನಿರಾಕರಣೆ ಮಾಡಿದರೆ ಹೇಗೆ? The gist of my question in this. last time ನಾವು SC/STಗಳಿಗೆ ಸರ್ಕಾರವೇ ಫೀಸನ್ನು ತುಂಬಿ COMED-K ನಲ್ಲೂ ಅವಕಾಶ ಕೊಡುತ್ತೇವೆಂದು ಹೇಳಿದ್ದರು. ಸರ್ಕಾರ CET ಮತ್ತು COMED-K ಎರಡೂ ಒಂದೇ ಸಾರಿ ನಡೆಯುತ್ತಿರುವುದನ್ನು ಗಮನಿಸಿಲ್ಲ. ಈಗ for example, ಒಬ್ಬ ವಿದ್ಯಾರ್ಥಿ CETನಲ್ಲಿ 500ನೇ ರ್‍ಯಾಂಕ್ ಬಂದಿರುತ್ತಾನೆ, ಅವನು

COMED-K ನಲ್ಲೂ 500ನೇ ರ್‍ಯಾಂಕ್ ಬಂದಿರುತ್ತಾನೆ ಎಂದಿಟ್ಟುಕೊಳ್ಳಿ. COMED-K ನಲ್ಲಿ ಅವನಿಗೆ ಒಳ್ಳೆಯ ಕಾಲೇಜಿನಲ್ಲೂ ಸೀಟು ಸಿಗುವುದಿಲ್ಲ. ಆ ಬಡ ಮಕ್ಕಳಿಗೆ ಆಗ ಯಾವ ರೀತಿಯಲ್ಲಿ justification ಕೊಡುತ್ತೀರಿ? SC-ST ಗಳಿಗೆ ಅನ್ಯಾಯವಾಗುವುದರ ಜೊತೆಗೆ, other OBCs ಮತ್ತು Minorities ಬಡವರು ಯಾರಿದ್ದಾರೆ, ಅವರಿಗೂ ಕೂಡ ಇಲ್ಲಿ ಅನ್ಯಾಯವಾಗುತ್ತಿದೆ. ಇದನ್ನು ಸರಿ ಮಾಡುವುದಕ್ಕೆ ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆ? COMED-K ತುಂಬುವ 60% ಸೀಟುಗಳಲ್ಲಿ SC-ST quota ತುಂಬುವುದಲ್ಲದೇ, ಸರ್ಕಾರವೇ ಅವರಿಗೆ ಫೀಸುಗಳನ್ನು ಕೊಟ್ಟು, ಪ್ರವೇಶವನ್ನು ಒದಗಿಸಿಕೊಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಉನ್ನತ ಶಿಕ್ಷಣ ಸಚಿವರನ್ನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಡಿ.ಹೆಚ್. ಶಂಕರಮೂರ್ತಿ:– ಮಾನ್ಯ ಅಧ್ಯಕ್ಷರೆ, ಮೊದಲನೆಯದಾಗಿ, ಎರಡು ಪ್ರಶ್ನೆಗಳನ್ನು ಗೌರವಾನ್ವಿತ ಸದಸ್ಯರು ಕೇಳಿದ್ದಾರೆ, ಈ CET date ಗಳು ಮತ್ತು COMED-K counselling date ಗಳು clash ಆಗುತ್ತಿವೆ, ಇದರಿಂದ ಮಕ್ಕಳಿಗೆ ಅನ್ಯಾಯವಾಗುತ್ತದೆ ಎಂದು ಅವರು ಹೇಳಿದರು. ಇಲ್ಲ, ಆ dates ಅನ್ನು ನಾವು change ಮಾಡಿದ್ದೇವೆ. ಇವತ್ತಿನಿಂದ CET casual round ಪ್ರಾರಂಭವಾಗುತ್ತಿದೆ. ಇವತ್ತಿನಿಂದ 30ನೇ ತಾರೀಖಿನವರಿಗೆ ಮೆಡಿಕಲ್ ಸೀಟುಗಳ ಕೌನ್ಸಲಿಂಗ್ ಆಗುತ್ತದೆ. 1ನೇ ತಾರೀಖಿನಿಂದ ಇಂಜಿನಿಯರಿಂಗ್ counselling casual round ಪ್ರಾರಂಭವಾಗುತ್ತದೆ. ಇದಕ್ಕೆ ಪೂರಕವಾಗುವ ಹಾಗೆ, COMED-K ನವರೂ ಸಹ ಅವರ ಹಿಂದೆ announce ಮಾಡಿದ್ದ date ನ್ನು ಮುಂದಕ್ಕೆ ಹಾಕಿದ್ದಾರೆ. ಅದ್ದರಿಂದ ನಮ್ಮ ಯಾವುದೇ ಮಕ್ಕಳಿಗೆ ಯಾರಿಗೂ ಅನ್ಯಾಯವಾಗುವುದಿಲ್ಲ. ಅವರಿಗೆ ಅನುಕೂಲವಾಗುವ ಹಾಗೆ date ಗಳನ್ನು ಈಗಾಗಲೇ ನಾವು ಮುಂದಕ್ಕೆ ಹಾಕಿದ್ದೇವೆ. Mutual agree ಮಾಡಿ ಅದನ್ನೆಲ್ಲಾ ಬಹಳ fine ಆಗಿ clear ಮಾಡಿದ್ದೇವೆ. Forfeiture clause ಅನ್ನೂ ಸಹ ತೆಗೆದಿದ್ದೇವೆ. ಏತಕ್ಕಾಗಿ ನಾವು announce ಮಾಡಿದ್ದ date ಗಳನ್ನು ಮುಂದಕ್ಕೆ ಹಾಕಿದೆವು ಎಂಬುದನ್ನು ಒಂದು ಹೆಜ್ಜೆ ಮುಂದಕ್ಕೆ ಹೋಗಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಸೀಟುಗಳ ಸಂಖ್ಯೆಯನ್ನು ಜಾಸ್ತಿ ಮಾಡಿದ್ದೇವೆ. ಮೆಡಿಕಲ್ ಕಾಲೇಜ್ ತೆರೆಯಲು ವಿಳಂಬವಾಗಿ ನಮಗೆ MCIನಿಂದ approval ಬಂದ ಕಾರಣಕ್ಕಾಗಿ, Medical Seats ಸಂಖ್ಯೆ ಜಾಸ್ತಿಯಾಯಿತು. AICTE ಯಿಂದ Engineering Colleges ಕೂಡ approval ಆಗಿ ಸೀಟುಗಳ ಸಂಖ್ಯೆ ಜಾಸ್ತಿಯಾಯಿತು. ಒಂದು ರೀತಿಯಾಗಿ ಇದು ಸಂತಸದ ಸಂಗತಿಯಾಗಿದೆ. ಈಗ 35,000/

ರೂ.ಗಳಿಗೆ free ಮೆಡಿಕಲ್ ಸೀಟು, ಸರ್ಕಾರಿ ಕಾಲೇಜ್‌ಗಳಲ್ಲಿ ಮೆಡಿಕಲ್ ಸೀಟ್ ಸಿಕ್ಕಿದವರಿಗೆ 14,500/– ರೂ.ಗಳು ಈಗ ಇದೆ Engineering ಸಹ free seat ಎಂದರೆ 25,000/ ರೂ.ಗಳು....

(ಗೊಂದಲ)

ಮಾನ್ಯ ಸಭಾಧ್ಯಕ್ಷರೆ, ಇನ್ನು ಮೀಸಲಾತಿ ಪ್ರಶ್ನೆ ಬಗ್ಗೆ ಹೇಳುವುದಾದರೆ, ಯಾವುದೇ ಕಾರಣಕ್ಕೆ ನಮ್ಮ ಮಕ್ಕಳಿಗೆ ಸೀಟುಗಳು ಕಡಿಮೆಯಾಗಲಿಲ್ಲ. ಆದರೆ ಸುಪ್ರೀಂ ಕೋರ್ಟಿನ ಜಡ್ಜ್‌ಮೆಂಟಿನ ಹಿನ್ನೆಲೆಯಲ್ಲಿ ನಮಗೆ ಹಿನ್ನಡೆಯಾಗಿದ್ದು ಹೌದು. ನಮ್ಮ ರಾಜ್ಯದ ಮಕ್ಕಳಿಗೆ ತೊಂದರೆಯಾಗಿದ್ದು ಹೌದು. ಬಹಳ ಮುಂಚೆ ಬೇರೆ ರೀತಿಯಲ್ಲಿ ಹಂಚುತ್ತಿದ್ದೆವು. ಸುಪ್ರೀಂ ಕೋರ್ಟಿನ ಜಡ್ಜಮೆಂಟ್ ಬಂದ ಮೇಲೆ ನಮ್ಮ ರಾಜ್ಯದ ಮಕ್ಕಳಿಗೆ, ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಮಾತ್ರವಲ್ಲ, ಎಲ್ಲರಿಗೂ ತೊಂದರೆಯಾಗಿತ್ತು. ಆದರೆ ಸುಪ್ರೀಂ ಕೋರ್ಟಿನ ಜಡ್ಜ್ ಮೆಂಟ್‌ನಲ್ಲಿ ಇರತಕ್ಕ clause ಅನ್ನು ಉಪಯೋಗಿಸಿಕೊಂಡು ಮಾತುಕತೆ ಮೂಲಕ ನಾವು ರಾಜ್ಯದ ಎಲ್ಲಾ ಮಕ್ಕಳಿಗೂ ಅದರಲ್ಲಿಯೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಮಕ್ಕಳಿಗೆ ಯಾವುದೇ ರೀತಿಯಲ್ಲಿ ಹಿಂದೆ ಕೊಡುತ್ತಿದ್ದ ಸೀಟುಗಳಿಗಿಂತ ಕಡಿಮೆಯಾಗದಂತೆ ನೋಡಿಕೊಂಡಿದ್ದೇವೆ. ಇನ್ನೂ ಜಾಸ್ತಿಯೇ ಮಾಡಿದ್ದೇವೆ. ಅವರೆಲ್ಲರ ಹಿತವನ್ನು ನಾವು ಕಾಪಾಡಿದ್ದೇವೆ.

ಡಾ॥ ಹೆಚ್.ಸಿ. ಮಹದೇವಪ್ಪ:– ಸನ್ಮಾನ್ಯ ಸಭಾಧ್ಯಕ್ಷರೆ, ಇವರು ಜಾಸ್ತಿ ಮಾಡಿದ್ದೇವೆ ಎಂದು ಹೇಳಿದರು. ಆದರೆ ಅದು ಜಾಸ್ತಿಯೇನೂ ಆಗಲಿಲ್ಲ. ಸುಪ್ರೀಂ ಕೋರ್ಟಿನ ಜಡ್ಜ್‌ಮೆಂಟ್ ಬಂದ ಮೇಲೆ 40% ಸರ್ಕಾರಕ್ಕೆ, 60% COMED-K ಕ್ಕೆ ಕೊಟ್ಟು, ಅದರಲ್ಲಿ 60% ನಲ್ಲಿ15% ಆಡಳಿತ ಮಂಡಳಿಗೆ ಮತ್ತು Preference ಗೆ 5% ಕೊಟ್ಟಮೇಲೆ, ಅಲ್ಲಿ ಮೀಸಲಾತಿಯೇ ಇಲ್ಲ. The question of increasing does not arise. ಎಲ್ಲಿ ಜಾಸ್ತಿಯಾಗುತ್ತದೆ? ಈಗ....

ಶ್ರೀ ಡಿ.ಹೆಚ್. ಶಂಕರಮೂರ್ತಿ:– ಮಾನ್ಯ ಸಭಾಧ್ಯಕ್ಷರೆ, percentage ಮಾತನಾಡುವುದು ಬೇರೆ. Total seats ಹೋದ ವರ್ಷ ಎಷ್ಟು ಕೊಟ್ಟಿದ್ದೇವೆ? ಈ ವರ್ಷ ಎಷ್ಟು ಕೊಟ್ಟಿದ್ದೇವೆ? ಎಂಬುದನ್ನು compare ಮಾಡಿದರೆ ನಿಮಗೆ ಗೊತ್ತಾಗುತ್ತದೆ. Total seats ಜಾಸ್ತಿಯಾಗಿದೆ.

ಡಾ॥ ಹೆಚ್.ಸಿ. ಮಹದೇವಪ್ಪ:– Compartative ಆಗಿ ನೀವು ಕೊಟ್ಟಿರುವ figures ಸರಿಯಾಗಿದೆ. 50959 ಇಂಜಿನಿಯರಿಂಗ್ ಸೀಟುಗಳಲ್ಲಿ ನೀವು 18% SC/ST

ಕೊಡಬೇಕೆಂದರೆ ಎಷ್ಟು ಕೊಟಿದ್ದೀರಿ? ಜಡ್ಜ್‌ಮೆಂಟ್ ಇದ್ದರೂ ಸಹ ನೀವು ಹೋದ ಸಾರಿ ಏನು ಹೇಳಿದಿರಿ? SC/ST ಮಕ್ಕಳಿಗೆ ಸರ್ಕಾರವೇ ಫೀಸನ್ನು ತುಂಬಿ, ಅಲ್ಲೂ ಕೂಡ ನಾವು ಒದಗಿಸುತ್ತೇವೆಂದು ಹೇಳಿದ್ದಿರಿ. ಸರ್ಕಾರ 18% ಹಣವನ್ನು ನೀವು ನಿಮ್ಮ ಇಲಾಖೆಯಲ್ಲಿ pool ಮಾಡುತ್ತೀರೋ ಅಥವಾ ಸಮಾಜ ಕಲ್ಯಾಣ ಇಲಾಖೆಯಿಂದ ಮಾಡುತ್ತೀರೋ ಗೊತ್ತಿಲ್ಲ. ನೀವು ಅಲ್ಲಿ 60% ಕೊಡದೇ ಹೋದರೆ, ಹೆಚ್ಚು ಕೊಡುವಂತಹ ಪ್ರಶ್ನೆ ಎಲ್ಲಿ ಬಂತು? ದಯಮಾಡಿ ನಾನು ಸರ್ಕಾರಕ್ಕೆ ಕೇಳುತ್ತಿದ್ದೇನೆ, COMED-K ಇರಬಹುದು, 15% NRI ಇರಬಹುದು, 5% preferential management ಮಾಡಬಹುದು, ಅಲ್ಲಿ ಕೊಡತಕ್ಕಂಥ ಸೀಟಿಗೆ ಸರ್ಕಾರವೇ ಹಣವನ್ನು ಭರ್ತಿ ಮಾಡಿ ಅವರಿಗೆ ಸರ್ಕಾರ ಪ್ರವೇಶವನ್ನು ಒದಗಿಸಿಕೊಡಬೇಕು. ಇದು SC/ST ಒಂದೇ ಅಲ್ಲ.

ಅಧ್ಯಕ್ಷರು:– ನೀವೇನು ಇಲ್ಲಿ ಭಾಷಣ ಮಾಡುತ್ತಿದ್ದೀರಾ? ಪ್ರಶ್ನೆಯನ್ನು ಸಂಕ್ಷಿಪ್ತವಾಗಿ ಕೇಳಬೇಕು. ನೀವು ಎಲ್ಲಾ explainಮಾಡುವುದಕ್ಕೆ ಹೋದರೆ, it will take 4-5 minutes. ಮಾನ್ಯ ಸಚಿವರೆ, ದಯವಿಟ್ಟು ಉತ್ತರ ಹೇಳಿ.

ಡಾ॥ ಹೆಚ್.ಸಿ. ಮಹದೇವಪ್ಪ:– ಮಾನ್ಯ ಅಧ್ಯಕ್ಷರೆ, ಇದು ಬಹಳ ಮಹತ್ವದ್ದಾಗಿದೆ. ಇದು important ಆಗಿಲ್ಲವೆಂದರೆ ನಾನು ಈ ಮನೆ ಬಿಟ್ಟು ಆಚೆಗೆ ಹೋಗುತ್ತೇನೆ. My Dear Speaker, if this issue is not important, ನಾನು ಈ ಮನೆಯನ್ನು ಬಿಟ್ಟು ಆಚೆಗೆ ಹೋಗುತ್ತೇನೆ.

(ಗೊಂದಲ)

ಅಧ್ಯಕ್ಷರು: ಒಂದು ಗಂಟೆಯೊಳಗೆ ಪ್ರಶ್ನೋತ್ತರ ಮುಗಿಯಬೇಕು, ಆ ರೀತಿಯಲ್ಲಿ ನೀವು ಪ್ರಶ್ನೆಗಳನ್ನು ಕೇಳಬೇಕು. Question is important, if you go on explaining...

(ಗೊಂದಲ)

ಡಾ॥ ಹೆಚ್.ಸಿ. ಮಹಾದೇವಪ್ಪ: ಸರ್, ನಾನೇನು ಅಫೀಲ್ ಮಾಡುತ್ತಿದ್ದೇನೆಂದರೆ, ಸುಪ್ರೀಂ ಕೋರ್ಟ್ ಹೇಳಿದ ಕಾರಣಕ್ಕೆ ಅಲ್ಲಿ ಸರ್ಕಾರದಲ್ಲಿ ಅರವತ್ತು ಪರ್ಸೆಂಟ್ ಮೀಸಲಾತಿ ಇಲ್ಲ. ಸರ್ಕಾರವೇ ಮಕ್ಕಳಿಗೆ ಕಾಮೆಡ್–ಕೆ. ನಲ್ಲಿ ಪ್ರವೇಶ ಒದಗಿಸುವುದಕ್ಕೆ, ಕಾಮೆಡ್–ಕೆ ಅಭ್ಯರ್ಥಿಗಳ ಆಯ್ಕೆಗೆ ಅವರೇ ಹಣವನ್ನು ಕೊಟ್ಟು ಅವರ ಕೋಟಾ ಸರ್ಕಾರದ ಮುಖಾಂತರ ಅಲ್ಲಿಯೂ ತುಂಬಿಸಬೇಕು, it is my appeal to the Government.

ಶ್ರೀ ಡಿ.ಹೆಚ್. ಶಂಕರಮೂರ್ತಿ:– ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡದ ಮಕ್ಕಳ ವಿದ್ಯಾಭ್ಯಾಸಕ್ಕೆ ನಾವು ಬದ್ಧರಾಗಿದ್ದೇವೆ. ಮೊದಲನೆಯದಾಗಿ ಥ್ರೂ ರಿಸರ್ವೇಷನ್ ಅವರಿಗೆ ಸೀಟ್ ಕೊಡುವುದು, ಎರಡನೆಯದಾಗಿ, ಅವರಿಗೆ ಎಲ್ಲೇ ಸೀಟ್ ಸಿಕ್ಕರು, ಅವರ ಆದಾಯದ ಮೇಲೆ ಹೈಯರ್ ಎಜುಕೇಷನ್‌ಗೆ ನಾವು ಸಬ್ಸಿಡ್ಯಸ್ ಮಾಡುತ್ತೇವೆನ್ನುವುದು ಸರ್ಕಾರದ ಒಂದು ಪಾಲಿಸಿ ಇದೆ, ಅದರಲ್ಲಿ ಯಾವುದೇ ಹಿನ್ನೆಡೆಯನ್ನು ಮಾಡಿಲ್ಲ. ಹಿಂದಕ್ಕೆ ತೆಗೆದುಕೊಂಡಿಲ್ಲ. ಅದನ್ನು ಅವರಿಗೆ ನಾವು ಕೊಟ್ಟೇ ಕೊಡುತ್ತೇವೆ, ಅವರ ವಿದ್ಯಾಭ್ಯಾಸಕ್ಕಾಗಿ ಸಕಲ ಎಲ್ಲಾ ಸಪೋರ್ಟ್ ಅನ್ನು ನಾವು ಕೊಡುವುದಕ್ಕೆ ಬದ್ಧರಾಗಿದ್ದೇವೆ.

ಡಾ॥ ಹೆಚ್.ಸಿ. ಮಹಾದೇವಪ್ಪ: ಪಾಲಿಸಿ ಇದೆ. ಅವರಿಗೆ ಪ್ರೋತ್ಸಾಹ ಕೊಡುತ್ತೇವೆನ್ನುವುದರ ಬಗ್ಗೆ ಎಲ್ಲಾ ಕಾಲದಲ್ಲೂ ಸಂವಿಧಾನದಲ್ಲಿ ಆ ರೀತಿ ಅವಕಾಶ ಇದೆ. ಆದರೆ ಕಾಮೆಡ್–ಕೆ ನಲ್ಲಿ ಏನು ಅರವತ್ತು ಪರ್ಸೆಂಟ್ ಹೋಗಿದೆ, ಅಲ್ಲಿ ಈ ಜನಾಂಗದ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಪ್ರವೇಶ ಒದಗಿಸುವಾಗ ಸರ್ಕಾರವೇ ಕಾಮೆಡ್–ಕೆ ಅವರ ಫೀ ತುಂಬಿಸಿ ಪ್ರವೇಶ ಕೊಡಬೇಕೆಂಬುದು ಇಲ್ಲಿ ಮುಖ್ಯವಾದ ಸಂಗತಿ, ಅದನ್ನು ಮಾಡಬೇಕು. ನಾವು ಪ್ರೋತ್ಸಾಹ ಕೊಡುತ್ತೇವೆನ್ನುವುದು, ನೋಡಿ ಕಾಮೆಡ್–ಕೆ ನಲ್ಲಿ ಸರ್ಕಾರವೇ ನಿಂತು ಆ ಮಕ್ಕಳಿಗೆ ಪ್ರವೇಶ ಕೊಡಬೇಕು, ಅದನ್ನು ಲಾಸ್ಟ್ ಟೈಂ ಹೇಳಿದರು.

ಅಧ್ಯಕ್ಷರು:– ನೋಡಿ ಸ್ವಾಮಿ ಕಾಮೆಡ್–ಕೆ ನಲ್ಲಿ ನಿಮ್ಮ ಮ್ಯಾನೇಜ್‌ಮೆಂಟ್‌ನವರೇನು ಕೊಡುತ್ತಿದ್ದಾರೆ, ಅದನ್ನು ರಿಸವೇರ್ಷನ್ SC ಅಭ್ಯರ್ಥಿಗಳಿಗೂ ಕೊಡುತ್ತಿದ್ದಾರೆಯೇ ಎಂಬ ಪ್ರಶ್ನೆಯನ್ನು ಅವರು ಮುಖ್ಯವಾಗಿ ಕೇಳುತ್ತಿರುವುದು.

ಶ್ರೀ ಡಿ.ಹೆಚ್. ಶಂಕರಮೂರ್ತಿ:– ಸುಪ್ರೀಂ ಕೋರ್ಟ್ ತೀರ್ಪಿನ ಪ್ರಕಾರ ಕೊಡುವುದಕ್ಕೆ ಬರುವುದಿಲ್ಲ.

ಅಧ್ಯಕ್ಷರು:– ಆ ರೀತಿ ಅವರಿಗೇನಾದರೂ ಕೊಟ್ಟಿದ್ದರೆ, ಅವರಿಗೆ ಪ್ರೋತ್ಸಾಹ ಧನವನ್ನು ಕೊಟ್ಟು, ಅವರ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಡಬೇಕು, ನೀವು ಅದನ್ನು ಕೇಳಿ ಸುಮ್ಮನೆ ಕತೆ ಹೇಳಬೇಡಿ.

ಡಾ॥ ಹೆಚ್.ಸಿ. ಮಹಾದೇವಪ್ಪ:– ಸರ್ಕಾರ ಅಲ್ಲಿ ಅವರಿಗೆ ಫೀ ತುಂಬಬೇಕು.

ಡಾ॥ ವಿ.ಎಸ್. ಆಚಾರ್ಯ:– All India level ಕಾಮೆಡ್ ಕೆ ಸೀಟುಗಳಲ್ಲಿ ಕರ್ನಾಟಕದವರು ಇರುತ್ತಾರೆ, ಅದು ನಮ್ಮ ಪೂಲ್ ಅಲ್ಲ. it is out of bunds of the Government. ನಾವು ಸರ್ಕಾರದಿಂದ ಫ್ರೀ ಸೀಟ್ ಎಂದೇನು ತೆಗೆದುಕೊಂಡಿದ್ದೇವೆ ಅದು ಮುಂಚೆಗಿಂತ ತುಂಬಾ ಜಾಸ್ತಿ ಇದೆ, ಯಾವುದೇ ದರವನ್ನು ಹೆಚ್ಚಿಗೆ ಮಾಡಿಲ್ಲ.

ಡಾ॥ ಹೆಚ್.ಸಿ. ಮಹಾದೇವಪ್ಪ: ಸರ್, ಸರ್ಕಾರ ಆ ಫೀ ಅನ್ನು, ಕಾಮೆಡ್–ಕೆ ನಲ್ಲಿ ಆಯ್ಕೆಯಾದಂಥ SC/ST ಅವರಿಗೆ ಅವರದೇನೂ ಕೋಟಾ ಇದೆ, ಇಲ್ಲಿ ಕೊಡಬೇಕು, ನೀವು ಫೀ ತುಂಬಿ, ಕಟ್ಟಿ ಅಷ್ಟೆ ಸಿಂಪಲ್, ಆ ಬಗ್ಗೆ ನಾನು ಇಲ್ಲಿ ಭಾಷಣವನ್ನು ಮಾಡುವುದಿಲ್ಲ. ಅವರು ಅದನ್ನು ವಿವರಿಸಬೇಕಾಗಿದೆ, ಅದು ನನಗೂ ಅನೇಕ ಸದಸ್ಯರಿಗೆಲ್ಲಾ ಗೊತ್ತಿದೆ, 40% ನಲ್ಲೂ reservation ಇದೆ. ಸುಪ್ರೀಂ ಕೋರ್ಟ್ ಡಿಸಿಷನ್ ಆದ ಮೇಲೆ 60%ನಲ್ಲಿ ರಿಸರ್ವೇಷನ್ ಇಲ್ಲ. ರಿಸರ್ವೇಷನ್ ಇಲ್ಲದೆ, ಅಲ್ಲಿ ಕಾಮೆಡ್–ಕೆ ನಲ್ಲಿ ಆಯ್ಕೆಯಾದ SC/ST ಮಕ್ಕಳಿಗೆ ಸರ್ಕಾರ ಫೀ ಅನ್ನು ತುಂಬಿ ಅವರಿಗೆ ಪ್ರವೇಶ ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಡಿ.ಹೆಚ್. ಶಂಕರಮೂರ್ತಿ:– ಸುಪ್ರೀಂ ಕೋರ್ಟ್ ತೀರ್ಪಿನ ಹಿನ್ನೆಲೆಯಲ್ಲಿ ನಮ್ಮ ರಾಜ್ಯದ ಮಕ್ಕಳಿಗೆ ಏನೇನು ರಕ್ಷಣೆಯನ್ನು ಕೊಡಬೇಕೋ ಅದನ್ನು ಕೊಟ್ಟು ಪ್ರೋತ್ಸಾಹಿಸುವ ವ್ಯವಸ್ಥೆಯನ್ನು ಮಾಡಿದ್ದೇವೆ. ಬೇರೆ ಜಾಗಗಳಲ್ಲಿ ನಮ್ಮ ಸೀಟುಗಳನ್ನು ತೆಗೆದುಕೊಂಡಿರುವ ಮಕ್ಕಳಿಗೆ ಸಹಾಯ ಮಾಡಬೇಕೆಂದು ಮಾನ್ಯ ಗೌರವಾನ್ವಿತ ಸದಸ್ಯರು ಕೇಳುತ್ತಿದ್ದಾರೆ. ಅವರ ಬಗ್ಗೆ ನಾವು ಬಹಳ ಗಂಭಿರವಾಗಿದ್ದೇವೆ. ಅವರಿಗೆ ಹೈಯರ್ ಎಜುಕೇಷನ್‌ನಲ್ಲಿ ಪ್ರೋತ್ಸಾಹ ಕೊಡುವುದಕ್ಕೆ ಅವರಿಗೆ ಆಯವ್ಯಯದಲ್ಲಿಯೇ ಪ್ರಕಟಿಸಿದ್ದೇವೆ. ಅದರ ಪ್ರಕಾರ ಅವರ್ಯಾರು ಎಲಿಜಿಬಲ್ ಇದ್ದಾರೆ, ಅವರಿಗೆಲ್ಲಾ ಕೊಡುವುದಕ್ಕೆ ನಾವು ಖಂಡಿತ ಬದ್ಧರಾಗಿದ್ದೇವೆ.

ಡಾ॥ ಹೆಚ್.ಸಿ. ಮಹಾದೇವಪ್ಪ: ಸರ್, ಇದಕ್ಕೆ ನಿರ್ದಿಷ್ಟ ಉತ್ತರವನ್ನು ಹೇಳಬೇಕು.

ಅಧ್ಯಕ್ಷರು: ನೀವು ಮಾಜಿ ಸಚಿವರಾಗಿದ್ದವರು, ನೀವು ಬಂದು ಕುಳಿತುಕೊಂಡರೆ ನನ್ನದೇನು ಇಲ್ಲ, ಪ್ರಶ್ನೋತ್ತರದ ಕಾಲದಲ್ಲಿ ಆ ರೀತಿ ಹೇಳಿದರೆ ಸಾಧ್ಯವಾಗುವುದಿಲ್ಲ. ಯಡಿಯೂರಪ್ಪನವರೆ, ನೀವು ಅವರಿಗೆ ಉತ್ತರವನ್ನು ಕೊಡಬಾರದು. ನೀವು ಮಾತನಾಡಿದರೆ ಈಗ ನಿಮ್ಮನ್ನು ಹೊರಗಡೆಗೆ ಕಳುಹಿಸುತ್ತೇನೆ.....

ಡಾ॥ ಹೆಚ್.ಸಿ. ಮಹಾದೇವಪ್ಪ:– ನನ್ನನ್ನು ಹೊರಗಡೆಗೆ ಕಳುಹಿಸಿದರೆ ಚಿಂತೆ ಇಲ್ಲ.

(ಈ ಸಂದರ್ಭದಲ್ಲಿ ಮಾನ್ಯ ಸದಸ್ಯರು ಸದನದ ಬಾವಿಗೆ ಬಂದರು)

ಅಧ್ಯಕ್ಷರು:– No, ಪ್ರಶ್ನೋತ್ತರ ಕಾಲದಲ್ಲಿ ನೀವು ಈ ರೀತಿ ನಡೆದುಕೊಳ್ಳುವುದು ಸರಿಯಲ್ಲ, ನಾನು ನಿಮಗೆ ಎರಡು ಉಪ ಪ್ರಶ್ನೆಗಳನ್ನು ಕೇಳುವುದಕ್ಕೆ ಅವಕಾಶ ಕೊಟ್ಟಿದ್ದೇನು, ಅವರು ದೀರ್ಘವಾಗಿ ಉತ್ತರವನ್ನು ಹೇಳಿದ್ದಾರೆ. ನೀವು ನಿಮ್ಮ ಸ್ಥಾನಕ್ಕೆ ಹೋಗಿ, this is not the way, ಇದು ಸರಿಯಾದ ಕ್ರಮವಲ್ಲ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು):– ಮಹಾದೇವಪ್ಪನವರೆ, ತಮ್ಮ ಸ್ಥಾನಕ್ಕೆ ಬಂದು ಮಾತನಾಡುವುದಕ್ಕಾಗುವುದಿಲ್ಲವೇ? ದಯಮಾಡಿ ಸ್ವಲ್ಪ ಒಂದು ನಿಮಿಷ ಕೇಳಿ, ನಮ್ಮ SC/ST ಕ್ಷೇತ್ರಗಳನ್ನು ಪ್ರತಿನಿಧಿಸತಕ್ಕಂಥ ಶಾಸಕರು, ಸರ್ಕಾರ, ಆ ಮಕ್ಕಳ ಅಭಿವೃದ್ಧಿಗಾಗಿ ಯಾವ ರೀತಿಯಾಗಿ ಚಿಂತನೆ ಮಾಡುತ್ತಿದೆ ಎಂಬುದಕ್ಕೆ ನಾನು ನಿಮಗೆ ಒಂದೇ ಒಂದು ಉದಾಹರಣೆಯನ್ನು ಕೊಡುತ್ತಿದ್ದೇನೆ. 6 ಸರ್ಕಾರಿ ಮೆಡಿಕಲ್ ಕಾಲೇಜುಗಳು ಅರಂಭವಾಗುತ್ತಿವೆ, 600 ಸೀಟುಗಳಲ್ಲಿ 300 ಸೀಟುಗಳ reservation ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡದವರಿಗೆ ಸಿಗುತ್ತಿದೆ, ಇದಕ್ಕಿಂತ ಏನು ಮಾಡಬೇಕು ಸ್ವಾಮಿ? ಎರಡನೆಯದು, ಸುಪ್ರೀಂ ಕೋರ್ಟ್ ಇದೆ, ನಾನು ಮಹಾದೇವಪ್ಪನವರನ್ನು ಕೇಳುತ್ತೇನೆ, ನಿಜವಾಗಿ ನಿಮಗೆಷ್ಟು ಕಳಕಳಿ ಇದೆಯೋ ಅಷ್ಟೆ ಕಳಕಳಿ ಈ ಸರ್ಕಾರಕ್ಕೆ ಇದೆ, ನೀವು ಮಾತನಾಡುವುದಕ್ಕೆ ನಮ್ಮದೇನು ವಿರೋಧವಿಲ್ಲ. ಬನ್ನಿ ಛೇಂಬರ್‌ನಲ್ಲಿ ಕುಳಿತು ಮಾತನಾಡೋಣ. ನೀವು ಈ ಸುಪ್ರೀಂ ಕೋರ್ಟ್ ಗೈಡ್‌ಲೈನ್ಸ್, ಡೈರೆಕ್ಷನ್ಸ್ ತಪ್ಪಿಸಿ ನಾವು ಯಾವ ರೀತಿ ಕೊಡಬಹುದೆಂಬುದನ್ನು ಹೇಳಿ ನಾವು ತಲೆಬಾಗುವುದಕ್ಕೆ ರೆಡಿ ಇದ್ದೇವೆ. ಒಂದು ರೀತಿ ನೀತಿ ಏನು ಇಲ್ಲದೇ ನೀವು ಸದನದ ಬಾವಿಯಲ್ಲಿ ಪ್ರಚಾರಕ್ಕಾಗಿ ನಿಮ್ಮಂಥ ಹಿರಿಯ ಸದಸ್ಯರು ಬಂದು ನಿಂತುಕೊಂಡರೆ ಹೇಗೆ ಧರ್ಮವಾಗಿರುತ್ತದೆ? I am sorry, ನಾನು ನಿಮ್ಮಿಂದ ಇದನ್ನು ನಿರೀಕ್ಷೆ ಮಾಡಿರಲಿಲ್ಲ.

ಅಧ್ಯಕ್ಷರು:– ಮಹಾದೇವಪ್ಪನವರೆ, ದಯಮಾಡಿ ಈಗ ನಿಮ್ಮ ಸ್ಥಾನಕ್ಕೆ ತೆರಳಿ, ನೀವು demands ಮೇಲೆ ಮಾತನಾಡಿ, ಸರ್ಕಾರದ ಪರವಾಗಿ ಒಂದು ಖಚಿತವಾದ ಉತ್ತರವನ್ನು ಕೊಡಿಸೋಣ, ಇದನ್ನು ಪ್ರಶ್ನೋತ್ತರ ಕಾಲದಲ್ಲಿ ಮಾಡುವುದಲ್ಲ, ನಿಯಮವಿದೆ, ನಿಮ್ಮ ಸ್ಥಾನಕ್ಕೆ ತೆರಳಿ.

ಶ್ರೀ ಜೆ.ಸಿ. ಮಾಧುಸ್ವಾಮಿ:– ಇಲ್ಲಿರುವ ಪ್ರಶ್ನೆ, SC/ST ಹುಡುಗರು ಯಾವುದೇ ಕಾಲೇಜಿಗೆ ಸೇರಿದರೆ ಅವರ ಫೀ ಅನ್ನು ಸರ್ಕಾರ ಭರಿಸಬೇಕೆಂದು ಇಲ್ಲಿ ಅವತ್ತು ನಾವು ಚರ್ಚೆ ಮಾಡಿದ್ದೆವು. ಕಾಮೆಡ್–ಕೆ ನಲ್ಲೂ SC/ST ಮಕ್ಕಳಿಗೇನು ಸೀಟು ಸಿಕ್ಕಿದೆ ಆ ಫೀ ಅನ್ನು ತುಂಬುವುದಕ್ಕೆ ನಿಮಗೇನು ತೊಂದರೆ ಎಂಬುದು ಈಗಿರುವ ಪ್ರಶ್ನೆ. ನಿಮಗೆ ಅವರ ಬಗ್ಗೆ ನಿಜವಾಗಿಯೂ ಆಸಕ್ತಿ ಇದ್ದರೆ....

ಶ್ರೀ ಬಿ.ಎಸ್. ಯಡಿಯೂರಪ್ಪ:– ಚರ್ಚೆಗೆ ನಿಮ್ಮನ್ನು ಕರೆಯುತ್ತೇವೆ, ಬನ್ನಿ ಕುಳಿತು ಚರ್ಚೆ ಮಾಡೋಣ. ಆ ಬಗ್ಗೆ ಮಾತನಾಡುವುದಕ್ಕೆ ಮಹದೇವಪ್ಪನವರೆ, ನಾವು ಸಿದ್ದರಿದ್ದೇವೆ ಬನ್ನಿ ಸಾರ್. ನಾನು ನಿಮಗೊಂದು ಸಲಹೆಯನ್ನು ಕೊಡುತ್ತೇನೆ ಇವತ್ತು ನಾಳೆಯಲ್ಲಿ ನಿಮ್ಮನ್ನು ಚರ್ಚೆಗೆ ಕರೆಯುತ್ತೇವೆ. ನೀವು ಈ ಸುಪ್ರೀಂ ಕೋರ್ಟ್ ಡೈರೆಕ್ಷನ್ ಅಲ್ಲದೆ, ನಾವು ಯಾವ ರೀತಿಯಾಗಿ SC/STಮಕ್ಕಳಿಗೆ ಅನುಕೂಲ ಮಾಡಿಕೊಡಬಹುದೆಂಬುದರ ಬಗ್ಗೆ ಸಲಹೆಯನ್ನು ಕೊಡಿ. ನಾವು ಬಿಚ್ಚು ಮನಸ್ಸಿನಿಂದ ನಿಮ್ಮೊಡನೆ ಮಾತನಾಡುತ್ತೇವೆ, ಬನ್ನಿ ಮಾತನಾಡೋಣ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:– ಸುಪ್ರೀಂ ಕೋರ್ಟ್ ಡೈರೆಕ್ಷನ್ ಇರುವುದು reservation ಇಲ್ಲವೆಂದು ಫೀ ಕಟ್ಟಬಾರದೆಂದಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಫೀ ಕಟ್ಟಲು ಸರ್ಕಾರದ ಇತಿಮಿತಿ ಇದೆಯಲ್ಲ, ನೀವು ಏನು ಬೇಕಾದರು ಸಲಹೆಯನ್ನು ಕೊಡಬಹುದು.

ಶ್ರೀ ವಾಟಾಳ್ ನಾಗರಾಜ್:– ಯಡಿಯೂರಪ್ಪನವರೆ, ಸಿಟ್ಟು ಮಾಡಿಕೊಳ್ಳಬೇಡಿ, ಅವರಿಗೆ ತೊಂದರೆ ಇದೆ, ಸರಿಪಡಿಸಿ....

(ಗೊಂದಲ)

ಅಧ್ಯಕ್ಷರು:– ಯಾವುದು ರೆಕಾರ್ಡ್‌ಗೆ ಹೋಗುವುದು ಬೇಡ, ಶ್ರೀರಾಮರೆಡ್ಡಿಯವರೆ, ವಾಟಾಳ್ ನಾಗರಾಜ್‌ರವರೆ, ನಿಮಗೆ ಮಾತನಾಡಲು ಯಾರು ಅವಕಾಶ ಕೊಟ್ಟರು? ನೀವು ಹಿರಿಯ ಸದಸ್ಯರೋ, ಕಿರಿಯ ಸದಸ್ಯರೋ? ನೀವು ಸರಿಯಾದ ರೀತಿಯಲ್ಲಿ ನಡೆದುಕೊಂಡಿದ್ದರೆ, ಬೇರೆಯವರು ನಡೆದುಕೊಳ್ಳುತ್ತಿದ್ದರು, "ಹಿರಿಯ ಅಕ್ಕನ ಚಾಳಿ ಮನೆಮಕ್ಕಳಿಗೆಲ್ಲಾ ಅಂತ, "ನೀವು ಯಾವ ರೀತಿಯಾಗಿ ಗೈಡ್ ಮಾಡುತ್ತಿರಿ? (ಗೊಂದಲ) ದಯಮಾಡಿ ನೀವು ಕುಳಿತುಕೊಳ್ಳಿ ಅನೇಕ ಗಂಭೀರವಾದ ವಿಚಾರಗಳಿರುತ್ತವೆ, ಪ್ರಶ್ನೋತ್ತರ

ವೇಳೆಯಲ್ಲಿ ಎರಡು ಉಪ ಪ್ರಶ್ನೆಗಳಿಗೆ ಅವಕಾಶ ಕೊಡುತ್ತೇನೆ, ಬೇರೆ ಸಮಯವಿದೆ ಮಾತನಾಡಿ, ಬಗೆಹರಿಸಿಕೊಳ್ಳಿ, ಮಹಾದೇವಪ್ಪ ನಿಮ್ಮ ಸ್ಥಾನಕ್ಕೆ ಹೋಗಿ.

ಮಾನ್ಯ ಸದಸ್ಯರೊಬ್ಬರು: ಈ ಮಕ್ಕಳ ವಿದ್ಯಾಭ್ಯಾಸದ ಸಲುವಾಗಿ ಹಿಂದಿನ ಸರ್ಕಾರ ಏತಕ್ಕೆ ಮಾಡಲಿಲ್ಲವೆಂಬುದನ್ನು ಹೇಳಬೇಕು, ಸರ್ಕಾರ ಸುಮ್ಮನೆ ಮೊಸಳೆ ಕಣ್ಣೀರನ್ನು ಸುರಿಸುತ್ತಿದೆ.

(ಗೊಂದಲ)

ಅಧ್ಯಕ್ಷರು: ಈ ರೀತಿ ransom ಮಾಡುವುದಾದರೆ, XXXXX ನೀವು ransom ತೆಗೆದುಕೊಳ್ಳುತ್ತಿದ್ದಿರಿ, ಅವರು ಏತಕ್ಕೆ ಒಳಗಡೆಗೆ ಬರಬೇಕು, ಏಕೆ ಎಲ್ಲರೂ ಎದ್ದು ನಿಂತು ಮಾತನಾಡಬೇಕು, ನಾನು ಇದನ್ನು ಒಪ್ಪುವುದಿಲ್ಲ, ನೀವು ಕಾನೂನು, ನಿಯಮಗಳ ಪ್ರಕಾರ ಮಾತನಾಡಿ, you have to take the permission from the Chair. ನೀವು ನಿಮ್ಮ ಸ್ಥಾನಕ್ಕೆ ತೆರಳಿ

(ಗೊಂದಲ)

XXXXX ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗದುಹಾಕಲಾಗಿದೆ.

ಶ್ರೀ ವಾಟಾಳ್ ನಾಗರಾಜ್:– ನೀವು ಹೇಳಿದ ಮಾತು ಅಕ್ಷಮ್ಯ ಅಪರಾಧ.

ಅಧ್ಯಕ್ಷರು:– ಇದು ಸರಿಯಲ್ಲ, ಇದು ಯಾರಿಗೂ ಗೌರವ ತರತಕ್ಕಂಥದ್ದಲ್ಲ (ಗೊಂದಲ)

ಶ್ರೀ ಕೆ.ಜಯಪ್ರಕಾಶ ಹೆಗಡೆ:– ಸದಸ್ಯರ ಬಗ್ಗೆ ಆ ರೀತಿ ಹೇಳಬಾರದು,

(ಗೊಂದಲ)

(ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಾದ ಡಾ॥ ಹೆಚ್.ಸಿ. ಮಹಾದೇವಪ್ಪನವರು ತಮ್ಮ ಸ್ಥಾನಕ್ಕೆ ತೆರಳಿದರು) (ಮುಂದು)

ವಾಟಾಳ್ ನಾಗರಾಜ್:– XXXXX ದಯವಿಟ್ಟು ಈ ಶಬ್ದವನ್ನು ಕಡತದಿಂದ ತೆಗೆಸಬೇಕು.

ಅಧ್ಯಕ್ಷರು: ನಾನು ಕರೆದರೆ ಮಾತ್ರ ಮಾತನಾಡಿ. ಇಲ್ಲದಿದ್ದರೆ ಮಾತನಾಡಬೇಡಿ. No. I won't Agree

ಶ್ರೀ ವಾಟಾಳ್ ನಾಗರಾಜ್: ಈ ಸದನದ ಅಧ್ಯಕ್ಷರು ತಾವು ನಿಮ್ಮ ಬಗ್ಗೆ ನಾನು ಬಹಳ ಗೌರವ ಇಟ್ಟುಕೊಂಡಿದ್ದೇನೆ. ಅದು ರೆಕಾರ್ಡ್‌ಗೆ ಹೋಗಿದೆ. ದಯಮಾಡಿ ಆ ಮಾತು ಸರಿಯಾದ ಕ್ರಮ ಅಲ್ಲ. ನಿಮಗೆ ಶೋಭೆ ತರುವುದಿಲ್ಲ.

ಅಧ್ಯಕ್ಷರು: ನೀವು ಗೌರವ ತರುತ್ತಿದ್ದೀರಾ, ನೋಡಿಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್: ಇದು ಸರಿಯಲ್ಲ. X X X X X ನಾನು ಬಹಳ ನೋವಿನಿಂದ ನಿಮ್ಮ ಹೇಳಿಕೆಯನ್ನು ವಿರೋಧಿಸಿ ಹೊರಗೆ ಹೋಗುತ್ತಿದ್ದೇನೆ. ಇದು ಇತಿಹಾಸಕ್ಕೆ ಹೋಗಲಿ. ಸದಸ್ಯರನ್ನು ಈ ರೀತಿ ಕರೆಯತಕ್ಕಂತಹ ವಾದ ಸರಿಯಲ್ಲ.

(ಈ ಹಂತದಲ್ಲಿ ಶ್ರೀ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿ ಹೊರ ನಡೆದರು)

ಶ್ರೀ ಕೆ.ಆರ್. ರಮೇಶ್ ಕುಮಾರ್:– ನಾನು ತಮ್ಮಲ್ಲಿ ಕೈ ಜೋಡಿಸಿ ಕೇಳಿಕೊಳ್ಳುತ್ತಿದ್ದೇನೆ,

ಅಧ್ಯಕ್ಷರು:– ನಾನು ಹೇಳುವುದು ಏನೆಂದರೆ, ಒಂದಲ್ಲ ಹಲವಾರು ಸಾರಿ ಹೇಳಿದೇನೆ. ನೀವು ನನ್ನ ಅನುಮತಿ ತೆಗೆದುಕೊಂಡು ನಿಂತುಕೊಂಡು ಕೇಳಿ, ಎಲ್ಲರೂ ಒಂದೇ ಸಾರಿ ಎದ್ದು ನಿಂತು ಕೇಳುತ್ತಿರಿ. ಈ ಒಂದು ಸಣ್ಣ ವಿಷಯಕ್ಕೆ ಬಾವಿಯ ಒಳಗಡೆ ಬಂದು X X X X X ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗದುಹಾಕಲಾಗಿದೆ.

ಮಾತನಾಡಿದರೆ ಹೇಗೆ? ಪ್ರಶ್ನೋತ್ತರ ಕಾಲದಲ್ಲಿ ಮಾನ್ಯ ಮಹಾದೇವಪ್ಪನವರಿಗೆ ಎರಡು ದೀರ್ಘ ಪ್ರಶ್ನೆ ಕೇಳುವುದಕ್ಕೆ ಅವಕಾಶ ಮಾಡಿ ಕೊಟ್ಟಿದ್ದೇನೆ. ನಾನೂ clarify ಮಾಡಿ ಹೇಳಿದ್ದೇನೆ. ಇಷ್ಟೆಲ್ಲಾ ಆಗಿ ಬೇರೆ ರೀತಿಯಲ್ಲಿ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕೇ ಹೊರತು, ಈ ತರಹ ಮಾಡಿದರೆ ಏನು? ಏನನ್ನಿಸುತ್ತದೆ? ಬೇರೆ ಬೇಕಾದಷ್ಟು ದಾರಿಗಳಿವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:– ಅವರು ಆ ರೀತಿ ಮಾಡಿದ್ದು ನಾವು ಸಮರ್ಥನೆ ಮಾಡುತ್ತಿಲ್ಲ. ಮಾನ್ಯ ಮಹಾದೇವಪ್ಪನವರು ಬಾವಿಗೆ ಬಂದಿದ್ದನ್ನು ನಾವು ಸಮರ್ಥನೆ ಮಾಡುತ್ತಿಲ್ಲ.

ಶ್ರೀ ಕೆ.ಆರ್.ರಮೇಶ ಕುಮಾರ್:– ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಜೊತೆ ಸಹಮತ ವ್ಯಕ್ತಪಡಿಸುತ್ತೇನೆ. ತಾವೂ ನಮ್ಮಂತೆ ಮನುಷ್ಯರು. ಕೆಲಸ ಮಾಡುವಾಗ ಒಂದೊಂದು ಸಲ

ಉದ್ವೇಗಕ್ಕೆ ಒಳಗಾಗುತ್ತೇವೆ. ನಾನೂ ಆ ತರಹ ವರ್ತಿಸಿದ್ದುಂಟು. ಎಲ್ಲರಿಗೂ ತಾಳ್ಮೆ ಪರೀಕ್ಷೆ ಮಾಡಿದರೆ ಎಲ್ಲೋ ಒಂದು ಕಡೆ ಸಹನೆ ತಪ್ಪುತ್ತದೆ. ನೀವು ಹೇಳುವುದು ಸರಿ ಇದೆ. ನ್ಯಾಯವಾಗಿ ಇಲ್ಲಿ ಕೆಲಸ ಮಾಡುವುದು ಕಷ್ಟವಾಗುತ್ತದೆ. ನಾನು ತಮ್ಮಲ್ಲಿ ಅತ್ಯಂತ ನಮ್ರತೆಯಿಂದ ಬೇಡಿಕೊಳ್ಳುತ್ತೇನೆ. ಈ ಪದ ಕಡತದಲ್ಲಿ ಉಳಿಯುವುದು ಬೇಡ. ಇದು ಚೆನ್ನಾಗಿ ಕಾಣುವುದಿಲ್ಲ. ನಿಮಗೆ ಶೋಭೆ ತರುವುದಿಲ್ಲ. Let that not remain on the record.

ಅಧ್ಯಕ್ಷರು:– ಆಯಿತು ತೆಗೆಸಿ ಹಾಕುತ್ತೇನೆ. ಶೋಭೆ ತರುವುದಿಲ್ಲ ನಿಜ. ಇಲ್ಲಿರುವಂತಹ ನಡವಳಿಕೆಗಳ ಬಗ್ಗೆಯೂ ಹೇಳಬೇಕು. ಆ ಪದವನ್ನು ತೆಗೆಸಿ ಹಾಕಿದ್ದೇನೆ.

ಪಿ.ಯು. ಕಾಲೇಜು

186(1255) ಶ್ರೀ ಪಾಟೀಲ್ ಎಸ್.ಎಸ್. (ಮುಂಡರಗಿ)

ಮಾನ್ಯ ಉನ್ನತ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ:–

(ಅ) ಕರ್ನಾಟಕ ಯುನಿವರ್ಸಿಟಿ ಪಬ್ಲಿಕ್ ಸ್ಕೂಲ್, ಧಾರವಾಡ ಇಲ್ಲಿ ಪಿ.ಯು. ಕಾಲೇಜು ಪ್ರಾರಂಭಿಸಲು ಅಧ್ಯಯನ ಮಾಡಿ ವರದಿ ನಿಡಲು ಎಂ.ಐ. ಸವದತ್ತಿ ಅಧ್ಯಕ್ಷತೆಯಲ್ಲಿ ಸಮಿತಿ ನೇಮಿಸಿದ್ದು, ಸಮಿತಿಯಿಂದ ವರದಿ ಬಂದಿದೆಯೇ;

(ಆ) ಬಂದಿದ್ದರೆ, ವಿವರ ನೀಡುವುದು;

(ಇ) ಈ ವರದಿಯೂ ಪಿ.ಯ. ಕಾಲೇಜು ಪ್ರಾರಂಭಿಸಲು ಶಿಫಾರಸ್ಸು ಮಾಡಿದ್ದರೆ ಈ ವರದಿ ಪ್ರಕಾರ ಈ ವರ್ಷವೇ ಪಿ.ಯು. ಕಾಲೇಜು ಪ್ರಾರಂಭಿಸಲಾಗುವುದೇ?

ಶ್ರೀ ಡಿ.ಹೆಚ್. ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು)

(ಅ) ಬಂದಿದೆ.

(ಆ) ಅನುಬಂಧದಲ್ಲಿ ವಿವರಿಸಿದೆ.

(ಇ) ಸದರಿ ವರದಿಯನ್ನು ಕರ್ನಾಟಕ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭೆಯ ಪರಿಶೀಲನೆಗಾಗಿ ಮಂಡಿಸಲಾಗಿತ್ತು. ಸಿಂಡಿಕೇಟ್ ಸಭೆಯಲ್ಲಿ ಈ ಕೆಳಕಂಡಂತೆ ನಿರ್ಣಯಿಸಲಾಗಿದೆ.